# IN THE COURT OF THE ADDL. SENIOR CIVIL JUDGE & JMFC., GUBBI
**OS – 210/2023**

Witness present and duly sworn on : 20.03.2025.

Cross Examination: by Counsel for defendants :

ನನ್ನ ಗಂಡನ ಹೆಸರು ಶಿವಣ್ಣ. ಅವರು ಬದುಕಿದ್ದಾರೆ. ನನಗೆ ಈಗ 68 ವರ್ಷ ವಯಸ್ಸು. ನಾನು ವಿಧ್ಯಾಭ್ಯಾಸ ಮಾಡಿಲ್ಲ. ನನಗೆ ಕನ್ನಡ ಬರುತ್ತದೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದ ವಿಚಾರಗಳನ್ನು ನಾನು ಹೇಳಿ ಬರೆಸಿದ್ದೇನೆ. ಭದ್ರಯ್ಯ ನನ್ನ ಅಕ್ಕ ಪಕ್ಕದ ಮನೆಯವರು. ಲಕ್ಷ್ಮಮ್ಮ ರವರು ಭದ್ರಯ್ಯನವರ ಹೆಂಡತಿ. ನನಗೆ ಮತ್ತು ಪ್ರತಿವಾದಿಗಳಿಗೆ ವೈಮನಸ್ಸು ಇದೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯು ಪಂಚಾಯ್ತಿಯಲ್ಲಿ ಇದೆ. ಸದರಿ ಆಸ್ತಿಯು ಸರ್ವೆ ನಂಬರ್ ಅಥವಾ ಗ್ರಾಮಠಾಣಾದಲ್ಲಿ ಬರುತ್ತದೆ ಎಂದರೆ ಸರ್ವೆ ನಂಬರ್ ನಲ್ಲಿ ಬರುತ್ತದೆ. ನಿವೇಶನವು ಎಷ್ಟು ಗುಂಟೆ ಬರುತ್ತದೆ ಎಂದರೆ 2 ಗುಂಟೆ ಬರುತ್ತದೆ. ಸದರಿ ನಿವೇಶನದ ಪೂರ್ವ ಪಶ್ಚಿಮ ಮತ್ತು ಉತ್ತರ -ದಕ್ಷಿಣಕ್ಕೆ ಎಷ್ಟು ಅಡಿ ಎಂದರೆ ನನಗೆ ಗೊತ್ತಿಲ್ಲ.

ಮೂಲತಹ ಜಮೀನು ಸಾಹೇಬರಿಂದ ಬಂದಿರುತ್ತದೆ, ಅವರ ಹೆಸರು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಚಕ್ಕುಬಂದಿ ಪೂರ್ವಕ್ಕೆ ಚಂದ್ರಪ್ಪ, ಪಶ್ಚಿಮಕ್ಕೆ ಗೌರಮ್ಮ, ಕಾಳಪ್ಪ, ದಕ್ಷಿಣಕ್ಕೆ ಮಂಗಳಮ್ಮ, ಉತ್ತರಕ್ಕೆ ರಸ್ತೆ ಇರುತ್ತದೆ. ನಾನು ಕ್ರಯಪತ್ರಕ್ಕೆ ಸಾಕ್ಷಿಯಾಗಿ ಸಹಿ ಮಾಡಿಲ್ಲ. ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದರಾ ಎಂದರೆ ಮನೆ ಕಟ್ಟುವ ಸಮಯಕ್ಕೆ ಕಳೆದು ಹೋಗಿರುತ್ತದೆ. ನಮ್ಮ ಅಕ್ಕ ಪಕ್ಕ ಮನೆಯವರಾದ ಕಾರಣ ದಾಖಲೆಯು ಕಳೆದು ಹೋಗಿರುವ ವಿಷಯ ನನಗೆ ಗೊತ್ತಿದೆ. 2 ಗುಂಟೆ ಸಂಪೂರ್ಣ ವಿಸ್ತೀರ್ಣದಲ್ಲಿ ಮನೆ ಇದೆ. ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಮನೆಯ ಹಿಂಬದಿ ಹಿತ್ತಲು ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ದನದ ಕೊಟ್ಟಿಗೆ ಇದೆ. ಮನೆಯ ಮುಂಭಾಗ ಖಾಲಿ ಜಾಗ ಇದೆ ಎಂದರೆ ಸರಿ. ಎರಡು ತೆಂಗಿನ ಮರಗಳು ಇವೆ ಎಂದರೆ ಸರಿ. 2 ಗುಂಟೆ ಜಮೀನಿಗೆ ಖಾತೆ ಆಗಿರುವುದಿಲ್ಲ. 2 ಗುಂಟೆ ಜಮೀನಿಗೆ ಖಾತೆ ಆಗಿದೆ ಎಂದು ನಾನು ನನ್ನ ಸಾಕ್ಷಿ ಪ್ರಮಾಣ

ಪತ್ರದಲ್ಲಿ ಬರೆಸಿದ್ದೇನೆಂದರೆ ನನಗೆ ಗೊತ್ತಿಲ್ಲ. 2 ಗುಂಟೆ ಜಮೀನಿನ ಸರ್ವೆ ನಂ.43/2. ಅದರ ಖಾತೆ ನಂಬರ್ ನನಗೆ ಗೊತ್ತಿಲ್ಲ. ಸದರಿ ಖಾತೆ ನಂಬರ್ ಆಸ್ತಿಗೆ ಸಂಭಂದಿಸಿದಂತೆ ಹಾಜರುಪಡಿಸಿರುವ ದಾಖಲೆಯ ಬಗ್ಗೆ ನನಗೆ ಗೊತ್ತಿಲ್ಲ. ನಾನು ಬೇರೆ ಖಾತೆ ನಂಬರ್ ಆಸ್ತಿಯನ್ನು ದಾವಾ ಆಸ್ತಿಗೆ ಸಂಭಂದಿಸಿದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. 2 ಗುಂಟೆ ಜಮೀನಿಗೆ ಖಾತೆ ಆಗಿರಬಹುದು. ವಾಸ ಇರುವ ಕಾರಣ ಖಾತೆ ಆಗಿರಬಹುದು ಎಂದು ಹೇಳುತ್ತಿದ್ದೇನೆ.

ಚಕ್ಕುಬಂದಿಯಲ್ಲಿ ಇರುವ ಚಂದ್ರು ಎನ್ನುವವರು ಮಾಲೀಕರು ಅಥವಾ ಬಾಡಿಗೆದಾರರ ಎಂದರೆ ಬಾಡಿಗೆದಾರರು. ದಕ್ಷಿಣಕ್ಕೆ ಇರುವ ಮಂಗಳಮ್ಮನವರು ಮಾಲೀಕರು. ನೊಂದಣಿ ಸಂಖ್ಯೆ 1601/1968-69 ನಿರ್ವಹಾಣಾ ಜಾರಿ ದಿನಾಂಕಃ 09.07.1968 ಜಿ.ಯು ಮೊಹಮ್ಮದ್ ಹಯಾತ್ ಸಾಬ್ ರವರಿಗೆ ಖಾತೆ ಆಗಿರುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಭದ್ರಯ್ಯನವರು ಹಾಜರುಪಡಿಸಿದ್ದಾರೆ. ನಾನು ಹಯಾತ್ ಸಾಬ್ ರವರ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. 2 ಗುಂಟೆ ಜಮೀನಿಗೆ ಭದ್ರಯ್ಯನವರು ಖಾತೆ ಮಾಡಿಸಿಕೊಂಡಿದ್ದಾರೆ ಎಂದು ಹೇಳಿದ್ದು ಸದರಿ ಖಾತೆಯನ್ನು ಸಾಹೇಬರು ಮಾಡಿಸಿದ್ದಾರೆ. ದಾವಾ ಆಸ್ತಿಯ ವಿಚಾರಗಳು ನನಗೆ ಗೊತ್ತಿಲ್ಲದೆ ಇದ್ದರು ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ರೂ.90 ಮೌಲ್ಯಕ್ಕೆ ಖರೀದಿ ಮಾಡಿದ್ದಾರೆ. ಸಾಹೇಬರಿಂದ ಖರೀದಿಯ ಸಮಯಕ್ಕೆ ಋಣಭಾರದ ದಾಖಲೆಯ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ದಾಖಲೆಯ ಮಾಹಿತಿ ನನಗೆ ಗೊತ್ತಿಲ್ಲ. ಋಣಭಾರ ದಾಖಲೆಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದಾರೆ. ಭದ್ರಯ್ಯನವರು ಗ್ರಾಮ ಪಂಚಾಯ್ತಿಯಿಂದ ದಾಖಲೆಗಳನ್ನು ಮಾಡಿಸಿದ್ದಾರೆ. ಯಾವ ಇಸ್ವಿಯಲ್ಲಿ ಮಾಡಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ರೂ.100 ಕ್ಕೆ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಮನೆಯು ಕರೆಹಂಚಿನ ಮನೆ. ಸುಮಾರು 50-60 ವರ್ಷದ ಕರೆಹಂಚಿನ ಮನೆಯಾಗಿದ್ದು,ಇತ್ತಿಚೇಗೆ ಶೀಟ್ ಹಾಕಿರುತ್ತಾರೆ. ಸಿಮೆಂಟ್ ಶೀಟ್ ಹಾಕಿರುತ್ತಾರೆ.

ಭದ್ರಯ್ಯನವರು ಸುಮಾರು 50 ವರ್ಷದಿಂದ ದಾವಾ ಆಸ್ತಿಯಲ್ಲಿ ಇದ್ದಾರೆ. ಭದ್ರಯ್ಯನವರು ಮಾಲೀಕರಾ ಅಥವಾ ಬಾಡಿಗೆದಾರರ ಎಂದರೆ ಬಾಡಿಗೆ ಕೊಡುತ್ತಿಲ್ಲ. ಮೇಲಾಧಿಕಾರಿಗಳ ಆದೇಶವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ. ದಾವಾ ಆಸ್ತಿಯ

ಸರ್ವೆ ನಕ್ಷೆ ಆಗಿದೆ. 2019 ರಲ್ಲಿ ತಾಲ್ಲೂಕು ಸರ್ವೆಯರ್ ಸ್ಥಳಕ್ಕೆ ಬಂದಿದ್ದ ಮಾಹಿತಿ ನನಗೆ ಗೊತ್ತಿದೆ. ಅವರು ಸರ್ವೆ ಮಾಡಿದ್ದರು. ಸದರಿ ಸಮಯದಲ್ಲಿ ಸರ್ವೆಯರ್ ಭದ್ರಯ್ಯನವರಿಗೆ ದಾವಾ ಆಸ್ತಿಯಲ್ಲಿ ಅನುಭವ ಇಲ್ಲ ಮತ್ತು ಹೊರಗಡೆ ಹೋಗಬೇಕು ಎಂದು ತಿಳಿಸಿದ್ದು, ಸದರಿ ಮಾಹಿತಿ ನನಗೆ ಗೊತ್ತಿದೆ. ಮೊಹಮ್ಮದ್ ಹಯಾತ್ ಸಾಬ್ ರವರ ದಕ್ಷಿಣಕ್ಕೆ ಜಮೀನು ಇದೆ ಎಂದರೆ ಸರಿ. 1976-77 ರಿಂದ ಅವರು ಚಕ್ಕುಬಂದಿಯ ಆಸ್ತಿಯಲ್ಲಿ ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿ. ಈಗ ನಾನು ಸ್ವಾಧೀನದಲ್ಲಿ ಇರುವ ಚಕ್ಕುಬಂದಿ ಆಸ್ತಿಯಲ್ಲಿ ಹಯಾತ್ ಸಾಬ್ ರವರ ಮಾಲೀಕತ್ವ ಎಂದು ಬರೆದಿಲ್ಲ ಎಂದರೆ ಸರಿಯಲ್ಲ. ಸದರಿ ಜಮೀನು ವ್ಯವಸಾಯದ ಜಮೀನು ಅಥವಾ ಗ್ರಾಮಠಾಣಾದ ಜಮೀನು ಎಂದರೆ ಗ್ರಾಮಠಾಣಾ. ಸದರಿ ಜಮೀನಿನಲ್ಲಿ ಮನೆ ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ ಆದರೆ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಯಾವ ಸರ್ವೆ ನಂಬರ್ ನಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.66 ರಲ್ಲಿ ಮನೆ ಇದೆ ಎಂದರೆ ಸರಿಯಲ್ಲ. ನನಗೆ ಅದರ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

ಭದ್ರಯ್ಯನವರು ಗೌರಮ್ಮನವರಿಗೆ ಬಾಡಿಗೆ ಕೊಡುತ್ತಿದ್ದಾರೆ ಎಂದರೆ ಬಾಡಿಗೆ ಕೊಡುತ್ತಿಲ್ಲ. ಸದರಿ ವಿಚಾರ ಅವರಿಬ್ಬರಿಗೆ ಮಾತ್ರ ಗೊತ್ತಿದೆ ಮತ್ತು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಅಕ್ಕ ಪಕ್ಕದ ಮನೆಯವರಾದ ಕಾರಣ ಮಾತನಾಡುತ್ತಿದ್ದು, ಅವರ ಮನೆಯ ವ್ಯವಹಾರಗಳು ನನಗೆ ಗೊತ್ತಿಲ್ಲ. ಪಹಣಿಯನ್ನು ಮಾಡಿಸುವುದಕ್ಕೆ ಯಾವುದಾದರು ಅರ್ಜಿ ಸಲ್ಲಿಸಿದ್ದಾರಾ ಎಂದರೆ ನನಗೆ ಗೊತ್ತಿಲ್ಲ. ಭದ್ರಯ್ಯನವರ ತಂದೆ ಮುನಿಯಪ್ಪ, ಅವರು ಜೀವಂತ ಇಲ್ಲ. ಅವರಿಗೆ ಸರ್ವೆ ನಂ.66 ರಲ್ಲಿ ಜಮೀನು ಇದೆ ಎಂದರೆ ಸರಿ. ಅದರ ವಿಸ್ತೀರ್ಣ ನನಗೆ ಗೊತ್ತಿಲ್ಲ. ಗೌರಮ್ಮನವರು ದಾವಾ ಆಸ್ತಿಗೆ ಕಂದಾಯ ಕಟ್ಟುತ್ತಿರುವ ವಿಷಯ ನನಗೆ ಗೊತ್ತಿತ್ತು ಎಂದರೆ ಅವರ ಜಮೀನಿಗೆ ಕಟ್ಟಿರುತ್ತಾರೆ. ಚಿಕ್ಕನರಸಯ್ಯ ರವರು ಭದ್ರಯ್ಯನವರ ತಾತ. ಅವರು ಭದ್ರಯ್ಯನವರ ತಾತ ಅಲ್ಲ ಆದರೆ ಸುಳ್ಳು ವಂಶವೃಕ್ಷವನ್ನು ನ್ಯಾಯಾಲಯದಲ್ಲಿ ಹಾಜರುಮಾಡಿದ್ದಾರೆ ಎಂದರೆ ಸರಿಯಲ್ಲ. ಮೊಹಮ್ಮದ್ ಅಯಾತ್ ಬ್ ರವರ ಮಗ ನನಗೆ ಗೊತ್ತಿದ್ದಾರೆ . ಅವರು ಜೀವಂತ ಇದ್ದಾರೆ. ಚಿಕ್ಕನರಸಯ್ಯನವರು ನಾಗಸಂದ್ರದ ಗ್ರಾಮದವರು ಎಂದರೆ ಹೆರೂರೂ ಪಾರ್ಮಿಂಗನವರು. ಚಿಕ್ಕನರಸಯ್ಯನವರು ಮೊಹಮ್ಮದ್ ಹಯಾತ್ ಸಾಬ್ ರವರ ಜಮೀನಿನಲ್ಲಿ ಉಳುಮೆ ಮಾಡುತ್ತಿದ್ದು, ಸದರಿ ವಿಷಯ

ನನಗೆ ತಿಳಿದಿತ್ತು ಎಂದರೆ ಸರಿ. ದಾವಾ ಆಸ್ತಿಯ ವಿಚಾರಗಳು ನನಗೆ ಗೊತ್ತಿಲ್ಲದೆ ಇದ್ದರು ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**Re examination - Nil**

(Typed to my dictation in open court)

R.O.I & A.C.

Addl. Senior Civil Judge and
JMFC., Gubbi